ಹೊಸ ವರ್ಷದಲ್ಲಿ ಅನುಭವಿ ಮೂರ್ತರಾಗಿ ಎಲ್ಲರನ್ನೂ ಅನುಭವಿಗಳನ್ನಾಗಿ ಮಾಡಿರಿ.

(ಶಾಂತಿವನ ಡೈಮಂಡ್ ಜೂಬಿಲಿ ಹಾಲ್ನ ಉದ್ಘಾಟನೆಯ ಸಮಯದಲ್ಲಿ)

ಇಂದು ದೃಷ್ಟಿಯಿಂದ ತೃಪ್ತರನಾಗಿ ಮಾಡುವಂತಹ ಬಾಪ್ದಾದಾರವರು ನೀವೆಲ್ಲಾ ಅತಿಸ್ನೇಹಿ, ಸಹಯೋಗಿ, ಸ್ನೇಹದಲ್ಲಿ ಲವಲೀನರಾಗುವಂತಹ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬ ಮಗುವಿನ ಮಸ್ತಕದಲ್ಲಿ, ಹೃದಯದಲ್ಲಿ ಸ್ನೇಹದ ಪುರಾವೆ ಕಾಣಿಸುತ್ತಿದೆ. (ಹಾಲ್ನಲ್ಲಿ ಹಿಂದೆ ಇರುವ ಸಹೋದರ ಸಹೋದರಿಯರೊಂದಿಗೆ) ನೀವು ಯೋಚಿಸುವಿರಿ ನಾವಂತು ಹಿಂದೆಗಡೆ ಇರುವವರಂತು ಕಾಣಿಸುವುದಿಲ್ಲ ಆದರೆ ಬಾಪ್ದಾದಾರವರ ನಯನಗಳಲ್ಲಿ ಇಂತಹ ಅದ್ಭುತವಾದ ಟಿ. ವಿ. ಇದೆ ಯಾವುದರಿಂದ ದೂರವಿರುವ ವಸ್ತುವು ಸಹ ಮುಂದೆ ಕಾಣಿಸುತ್ತದೆ. ಎಲ್ಲೇ ಯಾವುದೇ ಮೂಲೆಯಲ್ಲಿ ಕುಳಿತಿರಬಹುದು ಆದರೆ ತಂದೆಯ ಮುಂದೆ ಇದ್ದೀರಿ. ಈಗಂತೂ ಆರಾಮದಿಂದ ಕುಳಿತಿದ್ದೀರಲ್ಲವೇ. (ಚಪ್ಪಾಳೆ ತಟ್ಟಿದರು) ಇಂದು ಬಹಳ ಉಮಂಗ-ಉತ್ಸಾಹ ಮತ್ತು ಖುಷಿ ಇದೆಯಲ್ಲವೇ ಅದಕ್ಕೆ ಚಪ್ಪಾಳೆಯಿಂದ ತೋರಿಸುತ್ತಿದ್ದಾರೆ. ಆದರೆ ಬಾಪ್ದಾದಾ ನಿಮ್ಮ ಹೃದಯದ ಖುಷಿಯನ್ನು ತಿಳಿದುಕೊಂಡಿದ್ದಾರೆ. ಬಾಪ್ದಾದಾರವರು ನೋಡುತ್ತಿದ್ದಾರೆ ಪ್ರತಿಯೊಂದು ಮಗುವಿಗೆ ಸಹಯೋಗದ ಪುರಾವೆ ಕೊಡುವುದರಲ್ಲಿ ಬಹಳ ಖುಷಿಯಾಗುತ್ತದೆ ಅದಕ್ಕೆ ಸಾವಿರಾರು ಭುಜಗಳು ತೋರಿಸಲಾಗಿದೆ. ಅಂದಾಗ ಭುಜಗಳು ಸಹಯೋಗದ ಲಕ್ಷಣವಾಗಿದೆ. ಬಾಪ್ದಾದಾ ತಿಳಿದುಕೊಂಡಿದ್ದಾರೆ ಒಬ್ಬೊಬ್ಬ ಮಗುವು ನಾಲ್ಕಾರು ಕಡೆ ದೇಶದಲ್ಲಿ ಅಥವಾ ವಿದೇಶದಲ್ಲಿ, ಎಲ್ಲರೂ ಧನದಿಂದ, ಮನದಿಂದ ಅಥವಾ ತನದಿಂದ ಸಹಯೋಗ ಅವಶ್ಯವಾಗಿ ಕೊಟ್ಟಿದ್ದಾರೆ. ಮತ್ತು ಇವತ್ತು ನಿಮ್ಮೆಲ್ಲರ ಸಹಯೋಗದ ಪುರಾವೆ ಏನೆಂದರೆ ನೀವು ಆರಾಮವಾಗಿ ಕುಳಿತು ನೋಡುತ್ತಿದ್ದೀರಿ, ಕೇಳುತ್ತಿದ್ದೀರಿ. ಈಗ ಜಾಸ್ತಿ ಚಪ್ಪಾಳೆಯನ್ನು ತಟ್ಟಬೇಡಿ. ನಿಮ್ಮ ಖುಷಿಯ, ಮನಸ್ಸಿನ ಚಪ್ಪಾಳೆ ಬಾಪ್ದಾದಾರವರ ಹತ್ತಿರ ತಲುಪಿಬಿಟ್ಟಿದೆ.

ನೋಡಿ ಇಂದು ಎರಡು ವಿಶೇಷತೆಗಳಿವೆ. ಒಂದು ಈ ಶಾಂತಿವನವನ್ನು ಯಾರೆಲ್ಲಾ ಉಮಂಗ-ಉತ್ಸಾಹದಿಂದ ಮಾಡಿದಾರೆ ಅದರ ಬಾಪ್ದಾದಾರವರ ಜೊತೆ-ಜೊತೆಯಲ್ಲಿ ನೀವು ಮಕ್ಕಳದ್ದೂ ಸಹ ಉದ್ಘಾಟನೆ ಮಾಡುತ್ತಿದ್ದಾರೆ ಮತ್ತು ಇಂದು ಡ್ರಾಮಾ ಅನುಸಾರ ಹೊಸ ವರ್ಷವು ಆರಂಭವಾಗೇ ಬಿಡುವುದು ಅದಕ್ಕಾಗಿ ಬಾಪ್ದಾದಾ ಎಲ್ಲಾ ಮಕ್ಕಳನ್ನು ತಮ್ಮ ಎರಡು ಭುಜಗಳಲ್ಲಿ ಸಮಾವೇಶಿಕೊಳ್ಳುತ್ತಾ ಎರಡು ಮಾತಿನ ಶುಭಾಷಯಗಳನ್ನು ಕೊಡುತ್ತಿದ್ದಾರೆ. ಮತ್ತು ಹೇಗೆ ಈಗ ಈ ಸಮಯ ಸಾಕಾರ ರೂಪದಲ್ಲಿ ತಂದೆಯ ಜೊತೆ ಉಮಂಗ-ಉತ್ಸಾಹ ಮತ್ತು ಖುಷಿಯಲ್ಲಿ ತೂಗುತ್ತಿದ್ದೀರಿ ಅದೇ ರೀತಿ ಹೊಸ ವರ್ಷದಲ್ಲಿ ಸದಾ ಸದಾ ಅವ್ಯಕ್ತ ರೂಪದಲ್ಲಿ ಜೊತೆಗಾರರನ್ನಾಗಿ ತಿಳಿದು, ಅನುಭವ ಮಾಡಿರಿ - ಈ ಜೊತೆಯ ಅನುಭವ ಬಹಳ ಪ್ರಿಯವಾಗಿದೆ. ಬಾಪ್ದಾದಾರವರಿಗೂ ಮಕ್ಕಳವಿಲ್ಲದೆ ಚೆನ್ನಾಗಿ ಅನಿಸುವುದಿಲ್ಲ. (ಮೈಕ್ ಬಂದವಾಗಿ ಬಿಟ್ಟು) ಮೊದ-ಮೊದಲು ಅನುಭವವಿದೆಯಲ್ಲವೇ ಅದಕ್ಕೆ ಇದನ್ನು ಡ್ರಾಮದಲ್ಲಿ ಆಟವೆಂದು ತಿಳಿದು, ಯಾವುದೇ ಮಾತು ಏರುಪೇರೆಂದು ತಿಳಿದುಕೊಳ್ಳಬೇಡಿ. ಒಳ್ಳೆಯದು ಮತ್ತು ಒಳ್ಳೆಯದಾಗಿರುತ್ತದೆ. ಬಹಳ ಒಳ್ಳೆಯದು, ಬಹಳ ಒಳ್ಳೆಯದನ್ನು ಮಾಡುತ್ತಾ ನೀವು ಸಹ ಒಳ್ಳೆಯರಾಗಿಬಿಡುವಿರಿ ಮತ್ತು ಡ್ರಾಮಾದ ಪ್ರತಿಯೊಂದು ದೃಶ್ಯ ಸಹ ಒಳ್ಳೆಯದಾಗುವುದು ಏಕೆಂದರೆ ನಿಮ್ಮ ಒಳ್ಳೆಯರಾಗುವ ವೈಬ್ರೆಷನ್ ಎಂತಹದೇ ದೃಶ್ಯವಾಗಿರಲಿ ನಕರಾತ್ಮಕವನ್ನು ಸಕಾರಾತ್ಮಕದಲ್ಲಿ ಪರಿವರ್ತಿಸಿ ಬಿಡುವುದು, ಇಷ್ಟೊಂದು ಶಕ್ತಿ ನೀವು ಮಕ್ಕಳಲ್ಲಿದೆ ಕೇವಲ ಉಪಯೋಗಿಸಿ. ಶಕ್ತಿಗಳು ಬಹಳಷ್ಟಿದೆ, ಸಮಯದಲ್ಲಿ ಉಪಯೋಗಿಸಿ ನೋಡಿ ಆಗ ಬಹಳ ಒಳ್ಳೆಯ-ಒಳ್ಳೆಯ ಅನುಭವ ಮಾಡುವಿರಿ.

ಇದು ಹೊಸ ಹಾಲ್ ಮತ್ತು ಹೊಸ ವರ್ಷವಾಗಿದೆ ಇದರಲ್ಲಿ ಏನು ಮಾಡುವಿರಿ? ಹೊಸ ವರ್ಷದಲ್ಲಿ ಏನಾದರೂ ನವೀನತೆ ಮಾಡುವಿರಲ್ಲವೇ. ಈ ವರ್ಷ ಅನುಭವಿ ಮೂರ್ತರಾಗಿ ಅನ್ಯರಿಗೂ ಅನುಭವ ಮಾಡಿಸುವಂತಹ ವರ್ಷ. ತಿಳಿಯಿತೇ - ಏನು ಮಾಡಬೇಕು? ಅನುಭವ ಮಾಡಬೇಕು. ಅನುಭವಿ ಮೂರ್ತರಾಗಿದ್ದೀರಲ್ಲವೇ! ಅನುಭವಿ ಮೂರ್ತರಾಗಿದ್ದೀರಾ ಅಥವಾ ವಾಣಿ ಮೂರ್ತರಾಗಿದ್ದೀರಾ? ಅನುಭವಿರಾಗಿದ್ದೀರಿ ಆದರೆ ಈ ವರ್ಷದಲ್ಲಿ ಯಾವುದೇ ಇಂತಹ ಮಗು ಈ ರೀತಿ ಹೇಳುವುದಿಲ್ಲ ನನಗಂತೂ ಈ ಮಾತಿನ ಅನುಭವವಿದೆ, ಆದರೆ ಈ ಮಾತಿನ ಅನುಭವ ಬಹಳ ಕಡಿಮೆಯಿದೆ. ಇಂತಹ ಯಾವುದೇ ಮಗುವು ಇರಬಾರದು ಏಕೆಂದರೆ ಜ್ಞಾನದ ಅರ್ಥವಿದೆ ಕೇವಲ ತಿಳಿದುಕೊಳ್ಳುವುದಲ್ಲ ಆದರೆ ಅನುಭವ ಮಾಡುವುದು ಮತ್ತು ಎಲ್ಲಿಯವರೆಗೆ ಅನುಭವ ಮಾಡುವುದಿಲ್ಲವೆಂದಾಗ ಅನ್ಯರನ್ನು ಸಹ ಅನುಭವಿಯರನ್ನಾಗಿ ಮಾಡಲು ಸಾಧ್ಯವಿಲ್ಲ. ಒಂದುವೇಳೆ ವಾಣಿಯವರೆಗೆ ಇದೆ, ಅನುಭವದವರೆಗೆ ಅಲ್ಲ ಅಂದಾಗ ಯಾವ ಆತ್ಮರು ಸೇವೆಗೆ ನಿಮಿತ್ತರಾಗಿದ್ದಾರೆ ಅವರು ಸಹ ವಾಣಿ ಮೂಲಕ ಬಹಳ ಒಳ್ಳೆಯದು, ಬಹಳ ಒಳ್ಳೆಯದು, ಕಮಾಲವಾಗಿದೆ - ಇಲ್ಲಿಯವರೆಗೆ ಬರುವುದು. ಅನುಭವಿಯಾಗುವುದು – ಅದು ಕೋಟಿಯಲ್ಲಿ ಕೆಲವರು, ಕೆಲವರಲ್ಲಿಯೂ ಕೆಲವರಿದ್ದಾರೆ ಮತ್ತು ಪ್ರತ್ಯಕ್ಷತೆಯ ಆಧಾರ ಅನುಭವವಾಗಿದೆ. ಅನುಭವವುಳ್ಳ ಆತ್ಮರು ಎಂದೂ ಸಹ

ವಾಯುಮಂಡಲ ಅಥವಾ ಸಂಗದ ರಂಗಿನಲ್ಲಿ ಬರಲು ಸಾಧ್ಯವಿಲ್ಲ. ಕೇವಲ ವಾಣಿಯ ಪ್ರಭಾವವುಳ್ಳವರು ಕೆಲವೊಮ್ಮೆ ನೃತ್ಯ ಮಾಡುವರು ಮತ್ತು ಕೆಲವೊಮ್ಮೆ ಯೋಚನೆಯಲ್ಲಿ ಮುಳುಗುವರು, ಅನುಭವ ಅರ್ಥಾತ್ ಪಕ್ಕಾ ಫೌಂಡೇಷನ್. ಅರ್ಧ ಅನುಭವವಿದ್ದಾಗ ಅರ್ಧ ಫೌಂಡೇಷನ್ ಪಕ್ಕಾವಿದೆ, ಅದರ ಲಕ್ಷಣವಾಗಿದೆ – ಅವರು ಚಿಕ್ಕ ದೊಡ್ಡ ಮಾತುಗಳಲ್ಲಿ ಅಲುಗಾಡುವವರು, ಅಚಲವಾಗಿರುವುದಿಲ್ಲ ಏಕೆಂದರೆ ಬರುವವಂತಹ ಮಾತುಗಳು ಅಥವಾ ಸಮಸ್ಯೆಗಳು ಪ್ರಬಲವಾಗಿವೆ, ಅದಕ್ಕಾಗಿ ಅರ್ಧ ಫೌಂಡೇಷನ್ ಇರುವಂತಹವರು ಅಲುಗಾಡುತ್ತಾರೆ, ಬೀಳುವುದಿಲ್ಲ ಆದರೆ ಅಲುಗಾಡುತ್ತಾರೆ. ಮೊದಲು ಈ ವರ್ಷದಲ್ಲಿ ತಮ್ಮ ಅನುಭವಿಮೂರ್ತದ ಫೌಂಡೇಷನ್ ಪಕ್ಕಾ ಮಾಡಿಕೊಳ್ಳಿರಿ. ಕೆಲ ಮಕ್ಕಳು ಇಂದು ಬಹಳ ತೀವ್ರವಾಗಿ ನಡೆಯುತ್ತಾರೆ ಮತ್ತು ನಾಳೆ ಸ್ವಲ್ಪವು ಮುಖ ಪರಿವರ್ತನೆಯಾಗುತ್ತದೆ. ಕಾರಣ? ಅನುಭವದ ಫೌಂಡೇಷನ್ ಪಕ್ಕಾ ಇಲ್ಲ. ಅನುಭವವಿರುವ ಆತ್ಮರು ಎಷ್ಟೇ ದೊಡ್ಡ ಸಮಸ್ಯೆವನ್ನು ಈ ರೀತಿ ನಿವಾರಣೆ ಮಾಡುತ್ತಾರೆ ಏನು ಆಗಿಯೇ ಇಲ್ಲ. ಬಂದಿತು ಮತ್ತು ತಮ್ಮ ಪಾತ್ರವನ್ನು ಸಾಕ್ಷಿಯಾಗಿ ಅಭಿನಯಿಸಿದರು, ಭಿನ್ನರು ಮತ್ತು ಪ್ರಿಯರಾಗಿ ಆಟವನಾಗಿ ನೋಡುವರು. ಮಾತಲ್ಲ ಆಟ, ಮನೋರಂಜನೆ, ಮನೋರಂಜನೆ ಚೆನ್ನಾಗೆನಿಸುತ್ತದೆಯಲ್ಲವೇ? ಅಂದಾಗ ಯಾವುದೇ ಮಾತಿರಲಿ, ಯಾವಾಗ ಫೌಂಡೇಷನ್ ಕಚ್ಚಾ ಆಗಿರುತ್ತದೆ ಆಗ ನಿಮಗೆ ದೊಡ್ಡ ಮಾತೆನಿಸುತ್ತದೆ. 75% ಪಕ್ಕಾವಿರಲಿ ಅಥವಾ 90% ಪಕ್ಕಾವಿರಲಿ ಆದರೂ ಸಹ ಅಲುಗಾಡುವ ಸಂಭವವಿದೆ. ಬಾಪ್ದಾದಾರವರಿಗೆ ಮಕ್ಕಳ ಪರಿಶ್ರಮ ಅರ್ಥಾತ್ ಯುದ್ಧ ಮಾಡುವುದು ಚೆನ್ನಾಗೆನಿಸುವುದಿಲ್ಲ. ಪರಿಶ್ರಮ ಏಕೆ? ಯುದ್ಧ ಏಕೆ? ಯೋಗಿಯ ಬದಲಾಗಿ ಯೋದ್ಧರಾಗುವವರಿದ್ದೀರಾ ಅಥವಾ ಯೋಗಿ ಆತ್ಮರಾಗಿದ್ದೀರಾ? ಯುದ್ಧ ಮಾಡುವ ಸಂಸ್ಕಾರ ಚಂದ್ರವಂಶದಲ್ಲಿ ತೆಗೆದುಕೊಂಡು ಹೋಗುವರು ಮತ್ತು ಯೋಗಿತ್ವ ಆತ್ಮದ ಸಂಸ್ಕಾರ ಸೂರ್ಯವಂಶದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಅಂದಾಗ ಏನು ಆಗುವಿರಿ ಸೂರ್ಯವಂಶೀಯರು ಅಥವಾ ಚಂದ್ರವಂಶೀಯರಾಗುತ್ತೀರಾ? ಸೂರ್ಯವಂಶೀಯರಾಗಬೇಕೆಂದರೆ ಯುದ್ಧ ಸಮಾಪ್ತಿ. ಈ ವರ್ಷದಲ್ಲಿ ಯುದ್ಧ ಸಮಾಪ್ತಿಯಾಯಿತೇ? ಇದರಲ್ಲಿ ಹೌದು ಎನ್ನುವುದಿಲ್ಲ? ಹೇಳುವುದರಿಂದ ಹೇಳುತ್ತೀರಾ? ಬಾಪ್ದಾದಾರವರಂತು ನೋಡದೆ ಇದ್ದರು ಮಕ್ಕಳ ಫಲಿತಾಂಶವನ್ನು ನೋಡುತ್ತಾರೆ. ಪ್ರತಿ ಸಮಯದ ಫಲಿತಾಂಶ ನಯನಗಳ ಮುಂದೆ ಅಲ್ಲ ಆದರೆ ಹೃದಯದಲ್ಲಿ ಬಂದು ಬಿಡುತ್ತದೆ. ಇಲ್ಲಿ ಸಾಕಾರ ವತನದಲ್ಲಿ ಯಾವಾಗ ನೀವು ಸ್ವಲ್ಪ ಸ್ವಲ್ಪ ಅಥವಾ ಬಹಳ ಅಲುಗಾಡುತ್ತೀರಿ ಆಗ ತಂದೆಗೆ ಅಲ್ಲಿ ವತನದಲ್ಲಿ ಅನುಭವವಾಗುತ್ತದೆ ಯಾರೋ ಅಲುಗಾಡುತ್ತಿದ್ದಾರೆ, ಅದಕ್ಕೆ ಹೇಗೆ ಶಾಂತಿವನದ ಖುಷಿಯಿದೆ, ಹಾಲ್ನ ಖುಷಿಯಿದೆ, ಹಾಗೆ ಬಾಪ್ದಾದಾ ಮತ್ತು ಇಷ್ಟು ದೊಡ್ಡ ಸಂಘಟನೆಯ ಮಧ್ಯೆ ಮಾತು ಕೊಡಿ - ನಾನು ವರ್ಷದಲ್ಲಿ ಏರುಪೇರಿನಿಂದ ದೂರ ಅಚಲ ಅಡೋಲ್ ಆಗಿಯೇ ಇರುತ್ತೇವೆ. ಆಗುವೆವು ಅಲ್ಲ. ಆಗಿಯೇ ಇರುತ್ತೇವೆ. ಈ ರೀತಿಯಿದೆಯೇ? ಹೀಗೆ ಯಾರು ತಿಳಿಯುತ್ತಾರೆ ಆಗಿಯೇ ಇರುತ್ತೇವೆ, ಯೋಚಿಸುವೆವು, ಮಾಡುವೆವು, ನೋಡುವೆವು – ಇದಲ್ಲ, ಅವರು ಕೈ ಎತ್ತಿರಿ. ಒಳ್ಳೆಯದು. ಶುಭಾಷಯಗಳು ಮತ್ತು ಯಾರು ಯಾವುದೇ ಕಾರಣದಿಂದ ಎತ್ತಿಲ್ಲ, ಈ ರೀತಿಯಲ್ಲ ಆಗುವುದಿಲ್ಲವೆಂದು ಆದರೆ ಯಾವುದೋ ಕಾರಣದಿಂದ ಎತ್ತಿಲ್ಲ ಎನ್ನುವರು ಎತ್ತಿರಿ. ಕೈ ಎತ್ತುವುದರಲ್ಲಿ ನಾಚಿಕೆಯಾಗುತ್ತದೆ, ಯೋಚಿಸಿರಿ ಯಾವಾಗ ಕೈ ಎತ್ತುವುದರಲ್ಲಿ ನಾಚಿಕೆಯಾಗುತ್ತದೆ ಎಂದಾಗ ಮಾಡುವ ಸಮಯದಲ್ಲಿಯೂ ನಾಚಿಸುವಿರಿ. ಇದು ನಾಚಿಕೆಯ ಮಾತೆಂದು ಯೋಚಿಸಿದರೆ, ಆಗುವುದಿಲ್ಲ. ಪಕ್ಕಾ ಆಗಿಬಿಡುವಿರಿ ಏಕೆಂದರೆ ಕೆಲ ಮಕ್ಕಳು ಪದೇ-ಪದೇ ಕೇಳುತ್ತಾರೆ, ನಿಮಿತ್ತ ಅಕ್ಕಂದಿರಿಗೆ ಅಥವಾ ಆತ್ಮಿಕ ವಾರ್ತಾಲಾಪ ಮಾಡುವಾಗ ಬಾಪ್ದಾದಾರವರಿಗೆ ಒಂದೇ ಪ್ರಶ್ನೆಯನ್ನು ಮಾಡುತ್ತಾರೆ, ಬಾಬಾ ವಿನಾಶದ ದಿನಾಂಕವನ್ನು ಹೇಳಿಬಿಡಿ. ಎಲ್ಲರ ಪ್ರಶ್ನೆಯಾಗಿದೆಯಲ್ಲವೇ? ಒಳ್ಳೆಯದು ಬಾಪ್ದಾದಾರವರು ಹೇಳುತ್ತಾರೆ ದಿನಾಂಕವನ್ನು ಹೇಳಿ ಬಿಡುತ್ತೇನೆ- ಸರಿ ಎರಡು ಸಾವಿರದಲ್ಲಿ ಪೂರ್ಣವಾಗಿ ಬಿಡುತ್ತದೆ ಅಂದಾಗ ಏನು ಮಾಡುವಿರಿ? ಇದೇನು ದಿನಾಂಕವನ್ನು ಕೊಡುತ್ತಿಲ್ಲ, ತಪ್ಪಾಗಿ ತಿಳಿದುಕೊಳ್ಳಬೇಡಿರಿ. ಬಾಪ್ದಾದಾರವರು ಕೇಳುತ್ತಿದ್ದಾರೆ – ತಿಳಿದುಕೊಳ್ಳಿ ಎರಡು ಸಾವಿರ ಎಂದು ಹೇಳುತ್ತಾರೆ ಅಂದಾಗ ಏನು ಮಾಡುವಿರಿ? ಹುಡುಗಾಟಿಕೆಯವರಾಗುತ್ತೀರಾ ಅಥವಾ ತೀವ್ರ ಪುರುಷಾರ್ಥಿಯಾಗುತ್ತೀರಾ? ತೀವ್ರ ಪುರುಷಾರ್ಥಿಯಾಗುತ್ತೀರಿ! ಮತ್ತು ಬಾಪ್ದಾದಾರವರು ಹೇಳುತ್ತಾರೆ ಈ ವರ್ಷದಲ್ಲಿ ಏರುಪೇರು ಆಯಿತೆಂದರೆ ಏನು ಮಾಡುವಿರಿ? ಇನ್ನೂ ಹೆಚ್ಚು ತೀವ್ರ ಪುರುಷಾರ್ಥ ಮಾಡುವಿರಾ? ಅಥವಾ ಸ್ವಲ್ಪ-ಸ್ವಲ್ಪ ದಿನಾಂಕದ ಕಾನ್ಸೆಸ ಆಗಿಬಿಡುತ್ತೀರಾ, ಎಣಿಸುವಿರಿ ಇಷ್ಟು ಸಮಯ ಪೂರ್ಣ ಆಯಿತು, ಒಂದು ತಿಂಗಳು ಪೂರ್ಣ ಆಯಿತು, ಒಂದು ವರ್ಷ ಪೂರ್ಣ ಆಯಿತು, ಇಷ್ಟು ಸಮಯವಿದೆ! ದಿನಾಂಕದ ಕಾನ್ಸೆಸ ಆಗಿಬಿಡುತ್ತೀರಾ ಅಥವಾ ಸೋಲ್ (ಆತ್ಮ ) ಕಾನ್ಸೆಸ ಆಗುತ್ತೀರಾ? ಏನು ಆಗುವಿರಿ? ಹುಡುಗಾಟಿಕೆಯವರಾಗುವುದಿಲ್ಲವೇ? ಹೀಗಂತು ಯೋಚಿಸುವುದಿಲ್ಲ ತಾನೇ ಇನ್ನೂ 4 ವರ್ಷವಿದೆ? ಏನು ಆಯಿತು, ಕೊನೆಯ ವರ್ಷದಲ್ಲಿ ಮಾಡುವೆವು - ಈ ರೀತಿ ಹುಡುಗಾಟಿಕೆ ಮಾಡುವುದಿಲ್ಲವೇ ಅಥವಾ ಸ್ವಲ್ಪ-ಸ್ವಲ್ಪ ಆಗಿ ಬಿಡುತ್ತೀರಿ? ನೀವು ಆಗುವುದಿಲ್ಲ ಆದರೆ ಮಾಯೆ ಕೇಳುತ್ತಿದೆ, ಅದು ಇಂತಹ ಮಾತುಗಳನ್ನು ನಿಮ್ಮ ಮುಂದೆ ತೆಗೆದುಕೊಂಡು ಬರುವುದು ಯಾವುದರಿಂದ ಹುಡುಗಾಟಿಕೆ, ಆಲಸ್ಯ ಮಧ್ಯ-ಮಧ್ಯದಲ್ಲಿ ಬರುವುದು, ನಂತರ ಏನು ಮಾಡುವಿರಿ? ಅದಕ್ಕೆ ಬಾಪ್ದಾದಾರವರು ಮೊದಲೇ ತಿಳಿಸಿದ್ದಾರೆ - ದಿನಾಂಕದ ಕಾನ್ಸೆಸ ಆಗಬೇಡಿರಿ ಆದರೆ ಪ್ರತಿ ಸಮಯ ಅಂತಿಮ ಕ್ಷಣ, ಈ ರೀತಿ ಪ್ರತಿ ಕ್ಷಣದಲ್ಲಿ ಎವರ್‌ರೆಡಿಯಾಗಿರಿ. ಒಳ್ಳೆಯದು ತಿಳಿಯಿರಿ ಬಾಪ್ದಾದಾರವರು ಹೇಳುತ್ತಾರೆ ಎರಡು ಸಾವಿರದ ನಂತರವಾಗುವುದು, ನೀವು ಒಪ್ಪಿಕೊಂಡಿರಿ, ನಿಜವಲ್ಲ ಆದರೆ ಒಪ್ಪಿಕೊಂಡು ಬಿಟ್ಟಿರಿ. ನೀವು ಎರಡು ಸಾವಿರದಲ್ಲಿ ಸಂಪೂರ್ಣರಾಗುತ್ತೀರಿ ಮತ್ತು ಅನ್ಯರನ್ನು ಯಾವಾಗ ಮಾಡುತ್ತೀರಿ? ಸತ್ಯಯುಗದಲ್ಲಿ ಮಾಡುವಿರಿ ಏನು? ಮಾಡುವವರು ಕಡಿಮೆಯಿದ್ದಾರೆ ಮತ್ತು ಆಗುವವರು ಬಹಳಷ್ಟಿದ್ದಾರೆ, ಅವರಿಗೂ ಸಮಯ ಬೇಕಾಗುತ್ತದೆ ಅಥವಾ ಇಲ್ಲವೇ? ಮೊದಲಿನ ಸೀಜನ್ನಲ್ಲಿಯೂ ಕೇಳಲಾಗಿತ್ತು ಕಡಿಮೆ-ಕಡಿಮೆ ಸತ್ಯಯುಗದ ಆದಿ 9 ಲಕ್ಷ ತಯಾರಾಗಿದ್ದಾರೆಯೇ? ಆಗಿಲ್ಲವೆಂದರೆ ವಿನಾಶ ಹೇಗಾಗುವುದು? ಯಾರ ಮೇಲೆ ರಾಜ್ಯ ಮಾಡುವಿರಿ?

ಹಳೆಯ ಆತ್ಮರ ಮೇಲೆ ರಾಜ್ಯ ಮಾಡುವಿರಾ? ಹೊಸ ಆತ್ಮರು ತಯಾರಾಗಿಲ್ಲ ಮತ್ತು ವಿನಾಶವಾಗಿ ಬಿಟ್ಟರೆ ಏನು ಮಾಡುವಿರಿ? ಅದಕ್ಕೆ ಬಾಪ್ದಾದಾರವರು ಈ ಕಾರ್ಯವನ್ನು ತಮ್ಮ ಜ್ಯೋತಿಷಿ ಮಕ್ಕಳಿದ್ದಾರಲ್ಲವೇ, ಅವರ ಮೇಲೆ ಬಿಟ್ಟಿದ್ದಾರೆ. ಯಾವುದನ್ನು ಜ್ಯೋತಿಷಿಯರು ಮಾಡಬಹುದು ಅದನ್ನು ತಂದೆಯು ಏಕೆ ಮಾಡುವರು? ಆದರೂ ಸಹ ತಂದೆಯ ಮಕ್ಕಳು, ಅವರಿಗೆ ಸಂಪಾದಿಸಲು ಬಿಡಿ. ಅವರ ಸಂಪಾದನೆಯ ಸಾಧನ ಇದೆ ಆಗಿದೆ. ಒಂದುವೇಳೆ ಯಾರಿಗಾದರೂ ಬಹಳ ಬೇಗವಿದ್ದರೆ ಆ ಮಕ್ಕಳನ್ನು ಕೇಳಿ. ತಂದೆಯು ಹೇಳುವುದಿಲ್ಲ.

ತಿಳಿಯಿತೇ - ಈ ವರ್ಷ ಏನು ಮಾಡಬೇಕು? ಅನುಭವಿ ಮಾರ್ತಿ. ಕೆಲ ಮಕ್ಕಳು ಅತ್ಮಿಕ ವಾರ್ತಾಲಾಪದಲ್ಲಿ ಬಹಳಷ್ಟು ಮಧುರಾತಿ ಮಧುರ ವಾರ್ತಾಲಾಪ ಮಾಡುತ್ತಾರೆ, ಹೇಳುತ್ತಾರೆ – ಏನು ಮಾಡುವುದು ಬಾಬಾ, ಇಷ್ಟಂತು ಆಯಿತು, ಸ್ವಲ್ಪ ಇಷ್ಟು ನೀವು ಮಾಡಿರಿ. ನಾವು ರಾಜ್ಯ ಮಾಡುವೆವು ಆದರೆ ಸಂಪೂರ್ಣ ನೀವು ಮಾಡಿರಿ. ಈ ರೀತಿಯಾಗುವುದೇ? ತಂದೆ ಸಹಯೋಗಿ ಅವಶ್ಯವಾಗಿದ್ದಾರೆ ಮತ್ತು ಅಂತಿಮದವರೆಗೂ ಇರುವವರು, ಇದು ಗ್ಯಾರಂಟಿಯಾಗಿದೆ ಆದರೆ ಯಾರಿಗೆ ಸಹಯೋಗಿ? ಯಾರು ಮೊದಲು ಸಾಹಸದ ಹೆಜ್ಜೆ ಮುಂದಿಡುವರು, ನಂತರ ತಂದೆಯ ಸಹಯೋಗದ ಎರಡನೇ ಹೆಜ್ಜೆಯಿಡುವುದರಲ್ಲಿ ಸಂಪೂರ್ಣ ಸಹಯೋಗವಾಗುವುದು. ಸಾಹಸದ ಹೆಜ್ಜೆ ಇಡುವುದೇ ಇಲ್ಲ ಮತ್ತು ಕೇವಲ ಹೇಳುವಿರಿ ಬಾಬಾ ನೀವು ಮಾಡಿರಿ, ಬಾಬಾ ನೀವು ಮಾಡಿರಿ. ಅಂದಾಗ ಬಾಪ್ದಾದಾರವರೂ ಹೇಳುವರು ಮೊದಲು ಹೆಜ್ಜೆಯನ್ನಾದರೂ ಇಡಿ. ಒಂದು ಹೆಜ್ಜೆಯನ್ನು ಇಡುವುದಿಲ್ಲವೆಂದಾಗ ಹೇಗಾಗುವುದು! ಅದಕ್ಕೆ ಈ ವರ್ಷದಲ್ಲಿ ಪ್ರತಿ ಸಮಯ ಇದನ್ನು ಚೆಕ್ ಮಾಡಿಕೊಳ್ಳಿ ಸಾಹಸದ ಹೆಜ್ಜೆ ಬಲಶಾಲಿಯಾಗಿದೆಯೇ? ತಂದೆಗೆ ಹೇಳುವುದಕ್ಕೆ ಮೊದಲು ಇದನ್ನು ಚೆಕ್ ಮಾಡಿ. ಸಾಹಸದ ಹೆಜ್ಜೆ ಮುಂದಿದೆ ಮತ್ತು ಸಹಾಯ ಸಿಕ್ಕಿಲ್ಲ, ಇದು ಅಸಂಭವವಾಗಿದೆ. ಕೇವಲ ಸ್ವಲ್ಪ ಸಾಹಸದ ಹೆಜ್ಜೆಯನ್ನು ಮುಂದಿಡಿ, ಅದಕ್ಕೆ ಗಾಯನವಿದೆ ಮೊದಲನೇ ಶಬ್ದವೇನು ಬರುತ್ತದೆ? ಸಾಹಸ ಮಕ್ಕಳದು ಸಹಯೋಗ ತಂದೆಯದು, ಇದನ್ನು ಉಲ್ಟಾ ಮಾಡಬೇಡಿ - ಸಹಯೋಗ ತಂದೆಯದು ಮತ್ತು ನಂತರ ಸಾಹಸ ಮಕ್ಕಳದು. ತಂದೆಯಂತು ಮುಗುಳ್ನಗುತ್ತಿರುತ್ತಾರೆ, ವಾಹ್ ನನ್ನ ಮುದ್ದು ಮಕ್ಕಳೇ ವಾಹ್! ನಿಶ್ಚಯದಿಂದ ಸಾಹಸದ ಹೆಜ್ಜೆ ಸ್ವಲ್ಪವೂ ಮುಂದೆ ಇಟ್ಟರೆ ತಂದೆ ಪದಮಗುಣ ಸಹಯೋಗಕ್ಕಾಗಿ ಪ್ರತಿಯೊಂದು ಮಕ್ಕಳಿಗೋಸ್ಕರ ಪ್ರತಿ ಸಮಯ ತಯಾರಿದ್ದಾರೆ. ಒಳ್ಳೆಯದು, ಹೊಸ ವರ್ಷದಲ್ಲಿ ಮತ್ತೇನು ಮಾಡುವಿರಿ? ಇಲ್ಲಿಯವರೆಗೆ ಸೇವೆಯ ಒಂದು ಮಾತು ಇನ್ನೂ ಉಳಿದುಕೊಂಡಿದೆ. ಅದು ಯಾವುದಾಗಿದೆ? ಗೀತೆಯ ಭಗವಂತವಂತು ಆಗಿಬಿಡುವುದು, ಆದರೆ ಬಾಪ್ದಾದಾರವರು ಹಿಂದಿನ ವರ್ಷ ಪ್ರತಿ ಜೋûನ್ಗೆ ಹೇಳಲಾಗಿತ್ತು ಸ್ನೇಹಿ, ಸಹಯೋಗಿ, ಸಂಪರ್ಕದವರು ಬಹಳ ಆಗಿದ್ದಾರೆ ಮತ್ತು ಆಗುವರು ಆದರೆ ಈಗ ವಾರೀಸ್ ತಯಾರಿ ಮಾಡಿರಿ. ಸ್ನೇಹಿ, ಸಹಯೋಗಿ ಚೆನ್ನಾಗಿದ್ದಾರೆ ಆದರೆ ಅವರನ್ನು ಮುಂದುವರೆಸಿ ಅಥವಾ ಯಾರಾದರೂ ಹೊಸಬರನ್ನು, ಲಾಸ್ಟ್ನಲ್ಲಿ ಇರುವವರನ್ನು ಫಾಸ್ಟ್ ಮಾಡಿ ವಾರೀಸ್ ಕ್ವಾಲಿಟಿ(ಗುಣಮಟ್ಟದವರನ್ನು) ತಂದೆಯ ಮುಂದೆ ಕರೆದುಕೊಂಡು ಬನ್ನಿರಿ. ಕೆಲ-ಕೆಲವರು ಬರುತ್ತಾರೆ ಆದರೆ ಎಣಿಸುವಷ್ಟು ಇದ್ದಾರೆ. ಎರಡು ಸಾವಿರ ತನಕ ಪರಿವರ್ತನೆಯಾಗಿ ಬಿಡಲಿ ಎಂದು ಬಯಸುತ್ತೀರಿ, ಎಲ್ಲರೂ ಹೀಗೆ ಬಯಸುತ್ತೀರಿ ಅಂದಾಗ ವಾರೀಸ್ ಎಷ್ಟು ಮಾಡಿದ್ದೀರಿ? ಸತ್ಯಯುಗದ ಪ್ರಜೆಯು ಸಹ ರಾಯಲ್ ಆಗಿರಬೇಕು. ಅವರು ಕಡಿಮೆಯಿದ್ದಾರೆ. ಪ್ರಜೆಗಳು ಆಗಿದ್ದಾರೆ, ಈಗೇನಲ್ಲ ಅನೇಕ ಪ್ರಕಾರದ ಸಮ್ಮೇಳನಗಳು ಮಾಡಿದ್ದೀರಿ ಅಥವಾ ಹೊರಗಡೆ ಸ್ಟೇಜ್ ಮೇಲೆ ಪ್ರೋಗ್ರಾಮ್ ಸಿಕ್ಕಿವೆ, ಈ ವರ್ಷದಲ್ಲಿ ಪ್ರಭಾವ ಮತ್ತು ಪ್ರಜಾ - ಈ ಫಲಿತಾಂಶ ಚೆನ್ನಾಗಿದೆ. ಆದರೆ ಬಾಪ್ದಾದಾ ಏನು ಬಯಸುತ್ತಾರೆ? ಈ ವಾರೀಸ್ ಕ್ವಾಲಿಟಿ ತಾಯಾರಿ ಮಾಡಿರಿ, ಇಲ್ಲಿ ವಾರೀಸ್ ತಯಾರಿ ಮಾಡುವಿರಿ ಆಗ ಅಡ್ವಾಂಸ್ ಪಾರ್ಟಿಯು ಪ್ರತ್ಯಕ್ಷವಾಗುವುದು ಮತ್ತು ತಂದೆಯ ಹೆಸರಿನ, ಪ್ರತ್ಯಕ್ಷತೆಯ ಡಂಗುರ ನಾಲ್ಕಾರು ಕಡೆ ಬಾರಿಸಲಾಗುವುದು. ಇಲ್ಲಿಯವರೆಗಿನ ಫಲಿತಾಂಶದಲ್ಲಿ ಹೇಳುತ್ತಾರೆ ಇವರು ಸಹ ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದಾರೆ ಅಥಾವಾ ಕೆಲ-ಕೆಲವರು ಹೇಳುತ್ತಾರೆ ಇವರೇ ಮಾಡಬಹುದು, ಆದರೆ ಪರಮಾತ್ಮನ ಕಡೆಗೆ ಗಮನ ಹೋಗಲಿ, ಪರಮ ಆತ್ಮನ ಈ ಕಾರ್ಯ ನಡೆಯುತ್ತಿದೆ, ಅದು ಇನ್ನೂ ಗುಪ್ತವಾಗಿದೆ. ಮಕ್ಕಳು ತಮ್ಮ ಶಕ್ತಿಯಿಂದ, ಸ್ನೇಹದಿಂದ ತಂದೆಯನ್ನು ಪ್ರತ್ಯಕ್ಷ ಮಾಡುವ ಒಳ್ಳೆಯ ಪುರುಷಾರ್ಥ ಮಾಡುತ್ತಿದ್ದಾರೆ ಆದರೆ ಈಗ ಎಲ್ಲಿಯವರೆಗೆ ಸ್ನೇಹಿಯಾಗಿದ್ದಾರೆ, ಸಹಯೋಗಿಯಾಗಿದ್ದಾರೆ ಅಲ್ಲಿಯವರೆಗೆ ತಂದೆಯ ಪ್ರತ್ಯಕ್ಷತೆ ಮೈದಾನದಲ್ಲಿ ಬಂದಿಲ್ಲ. ಒಳ್ಳೆಯದಾಗಿದೆ - ಇಲ್ಲಿಯವರೆಗೆ ಆಗಿದೆ. ಆದರೆ ಎಲ್ಲರ ಮುಖದಿಂದ ಇದೇ ಬರಲಿ ಈಗ ಸಮಯ ಬಂದಿದೆ, ತಂದೆಯು ಬಂದಿದ್ದಾರೆ, ಆಗಲೇ ವಿನಾಶವಾಗುವುದು. ಅಂದಾಗ ತಂದೆ ಹೇಳುತ್ತಾರೆ ತಂದೆಯನ್ನು ಕೇಳಬೇಡಿ ಈ ವಿನಾಶ ಯಾವಾಗ ಆಗುವುದು? ತಂದೆಯು ನಿಮ್ಮನ್ನು ಕೇಳುತ್ತಾರೆ ನೀವು ಯಾವಾಗ ತಯಾರಾಗುವಿರಿ? ಪರದೇಯನ್ನು ತೆರೆಯೋಣವೇ, ತಯಾರಾಗಿದ್ದೀರಾ? ಪರದೇ ತೆರೆದು ಬಿಡುವುದು ಮತ್ತು ತಯಾರಿಯಾಗುತ್ತೀರುವಿರಿ? ಕಡಿಮೆ ಕಡಿಮೆ 16108 ಪಕ್ಕಾ ಪಕ್ಕಾ ರತ್ನವಂತು ಪ್ರತ್ಯಕ್ಷ ಮಾಡಿ, ಮಾಲೆಯನ್ನಂತು ಮಾಡಿರಿ. ತಂದೆಯು ಸಹ ನೋಡಲಿ ತಯಾರಾಗಿದ್ದೀರಾ? ಇಷ್ಟೇ ಮಾರ್ಜಿನ್ ಇದೆ, ಜಾಸ್ತಿ ಹೇಳುತ್ತಿಲ್ಲ. 9 ಲಕ್ಷ ಹೇಳುತ್ತಿಲ್ಲ, 16108ರ ಮಾಲೆಯನ್ನು ಮಾಡಿರಿ. ಅಂದಾಗ ಈ ವರ್ಷ ಮಾಡಿರಿ, ನೋಡಿರಿ 16108ರ ನಿರ್ವಿಘ್ನ, ಅಚಲ ಮಾಲೆ ತಯಾರಾಗಿದೆ ಅಥವಾ ಈಗ ಸ್ವಲ್ಪ- ಸ್ವಲ್ಪ ಅಲುಗಾಡುತ್ತದೆ? ಸ್ವಲ್ಪ-ಸ್ವಲ್ಪ ಆಟ ತೋರಿಸುತ್ತೀರಿ? ಪಾಂಡವರು ಏನು ತಿಳಿದುಕೊಳ್ಳುತ್ತೀರಿ? ಹೇಳಿರಿ, ತಯಾರಾಗಿದೀರಾ? ದಾದಿಯರಂತು ಹೇಳುತಾರೆ - ಹಾಂ ತಯಾರಾಗಿದ್ದೇವೆ. ಎಲ್ಲಾ ಶಕ್ತಿಯರದ್ದು ಹಾಂ ಆಗಿದೆಯೇ? 16108 ತಯಾರಾಗಿದೆಯೇ? ಒಳ್ಳೆಯದು 18 ತಾರೀಖಿಗೆ ಮಾಲೆಯನ್ನು ಮಾಡಿ ಕೊಡಿರಿ. ಕೈಯನ್ನು ಎತ್ತಿಸಿದರೆ ಅರ್ಧ ಸಭೆಯು 16 ಸಾವಿರರಲ್ಲಿ ಇದ್ದೇವೆಂದು ಹೇಳುತ್ತಾರೆ. ಯಾರು ತಿಳಿದುಕೊಳ್ಳುತ್ತೀರಿ - ನಾವು 16 ಸಾವಿರರಲ್ಲಿದ್ದೇವೆ, ಅವರು ದಾದಿಯರಿಗೆ ತಮ್ಮ ಚೀಟಿ ಬರೆದು ಕೊಡಿ

ನಾನು 16 ಸಾವಿರರಲ್ಲಿದ್ದೇನೆ ಅಥವಾ 108ರಲ್ಲಿ? ನಂತರ ದಾದಿಯರು ಪಾಸ ಮಾಡುವರು. ಈ ರೀತಿ ತಿಳಿದುಕೊಳ್ಳಬೇಡಿ ಚೀಟಿಯನ್ನು ಕೊಟ್ಟು ಬಿಟ್ಟಿದ್ದೇನೆ, ಮೊದಲು ಇವರು ಪಾಸ ಮಾಡುವರು ನಂತರ ಬಾಪ್ದಾದಾರವರು ಪಾಸ ಮಾಡುವರು, ನಂತರ ಅಂತಿಮ ಫಲಿತಾಂಶವನ್ನು ಹೇಳುವರು. ಒಳ್ಳೆಯದು.

ನಾಲ್ಕಾರು ಕಡೆಯ ಸರ್ವ ಉಮಂಗ-ಉತ್ಸಾಹದಿಂದ ಮುಂದುವರೆಯುವಂತಹ, ಸದಾ ಇಕಾನಾಮಿಯ(ಉಳಿತಾಯದ) ಅವತಾರರಾಗಿ ಸಮಯ, ಸಂಕಲ್ಪ, ವಾಣಿ ಮತ್ತು ಕರ್ಮವನ್ನು ಉಳಿತಾಯದ ಖಾತೆಯಲ್ಲಿ ಜಮಾ ಮಾಡುವಂತಹ, ಸಾಕಾರ ಅಥವಾ ಆಕಾರ ರೂಪದಲ್ಲಿ ಹೊಸ ವರ್ಷ ಆಚರಿಸುವಂತಹ ಅಗಲಿ ಮರಳಿ ಸಿಕ್ಕಿರುವ ಮಕ್ಕಳಿಗೆ, ಬಾಪ್ದಾದಾ ನೋಡುತ್ತಿದ್ದರು ನಾಲ್ಕಾರು ಕಡೆಯ ಮಕ್ಕಳ, ಸಾಕಾರದಲ್ಲಿ ಇಲ್ಲವೆಂದರೆ ಆಕಾರ ರೂಪದಲ್ಲಿ ಮಧುಬನದಲ್ಲಿದ್ದಾರೆ ಮತ್ತು ಆಕಾರ ರೂಪದಲ್ಲಿ ಆಚರಿಸುತ್ತಿದ್ದಾರೆ. ಎಲ್ಲರಿಗೂ ಬಾಪ್ದಾದಾರವರು ಹೊಸ ವರ್ಷದ, ಶಾಂತಿವನದ ಸ್ಥಾಪನೆಯ ಶುಭಾಷಯ ಮತ್ತು ನೆನಪು ಪ್ರೀತಿಯನ್ನು ಕೊಡುತ್ತಿದ್ದಾರೆ. ಎಲ್ಲಾ ಸಂತುಷ್ಟಮಣಿಯರಿಗೆ ನಮಸ್ತೆ.

ವರದಾನ: ವರದಾನ: ತಮ್ಮ ಆದಿ ಅನಾದಿ ಸ್ವರೂಪದ ಸ್ಮೃತಿಯ ಮೂಲಕ ಸರ್ವ ಬಂಧನಗಳನ್ನು ಸಮಾಪ್ತಿ ಮಾಡುವಂತಹ ಬಂದನಮುಕ್ತ ಸ್ವತಂತ್ರ ಭವ

ಆತ್ಮನ ಆದಿ ಅನಾದಿ ಸ್ವರೂಪ ಸ್ವತಂತ್ರವಾಗಿದೆ, ಮಾಲೀಕನಾಗಿದೆ. ಇಲ್ಲಂತು ಹಿಂದೆ ಪರತಂತ್ರರಾಗಿದ್ದಿರಿ ಆದ್ದರಿಂದ ತಮ್ಮ ಆದಿ ಮತ್ತು ಅನಾದಿ ಸ್ವರೂಪವನ್ನು ಸ್ಮೃತಿಯಲ್ಲಿಟ್ಟು ಬಂದನ ಮುಕ್ತರಾಗಿ. ಮನಸ್ಸಿನ ಬಂದನವೂ ಸಹ ಇರಬಾರದು ಒಂದುವೇಳೆ ಮನಸ್ಸಿನ ಬಂಧನವಿದ್ದರೂ ಸಹ ಆ ಬಂಧನ ಬೇರೆ ಬಂಧನಗಳನ್ನು ತರುವುದು. ಬಂಧನಮುಕ್ತ ಅರ್ಥಾತ್ ರಾಜಾ, ಸ್ವರಾಜ್ಯ ಅಧಿಕಾರಿ. ಈ ರೀತಿಯ ಬಂಧನಮುಕ್ತ ಸ್ವತಂತ್ರ ಆತ್ಮರೆ ಪಾಸ್ ವಿತ್ ಆನರ್ ಆಗುವುದು ಅರ್ಥಾತ್ ಫಸ್ಟ್ ಡಿವಿಷನ್ ನಲ್ಲಿ ಬರುವರು.

ಸ್ಲೋಗನ್: ಸ್ಲೋಗನ್: ಮಾಸ್ಟರ್ ದುಃಖ ಹರ್ತಾ ಆಗಿ ದುಃಖವನ್ನೂ ಸಹ ಆತ್ಮೀಯ ಸುಖದಲ್ಲಿ ಪರಿವರ್ತನೆ ಮಾಡುವುದೇ ಸತ್ಯವಾದ ಸೇವೆಯಾಗಿದೆ.